Pg-06, 27/12/2016

## ಎಸಿಬಿ ಬಲೆಗೆ ಬೆಸ್ಕಾಂ ಅಧಿಕಾರಿ ಜೆ.ರವೀಶ್

ಗುಬ್ಬಿ: ಗುಬ್ಬಿ ಬೆಸ್ಕಾಂ ಜೂನಿಯರ್ ಎಂಜಿನಿಯರ್ ಜೆ.ರವೀಶ್, ಶಿವ್ವೇರು ವಾಸಿ ರೈತ ಯಶವಂತ್ ಮತ್ತು ಸ್ನೇಹಿತರಿಂದ ವಿದ್ಯುತ್ ಪರಿವರ್ತಕ ಬದಲಾಯಿಸಲು 8000 ಸಾವಿರ ಲಂಚ ಪಡೆಯುತ್ತಿದ್ದಾಗ, ಸಂಜೆ 5.30ರ ಸಮಯದಲ್ಲಿ ಭ್ರಷ್ಟಾಚಾರ ನಿಗ್ರಹ ದಳಕ್ಕೆ ಸಿಕ್ಕಿ ಬಿದ್ದಿದ್ದಾರೆ. ತಂಡದ ನೇತೃತ್ವವನ್ನು ನಿಗ್ರಹದಳದ ಅಧಿಕಾರಿ ಕೋದಂಡರಾಮ್, ಇನ್ಸ್‌ಪೆಕ್ಟರ್ ಗಿರೀಶ್, ಗುರುಪ್ರಸಾದ್ ದಾಳಿ ನಡೆಸಿದ್ದಾರೆ. ಎರಡನೇ ಸತ್ರ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಗುವುದು ಎಂದು ಕೋದಂಡರಾಮ್ ತಿಳಿಸಿದರು.



Pg-07 27/12/2016

## ■ ವೈಟಿಪಿಎಸ್ ಮೇಲಿಂದ ಬಿದ್ದು ಕಾರ್ಮಿಕ ಸಾವು

ರಾಯಚೂರು: ಸಮೀಪದ ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ ವೆಲ್ಡಿಂಗ್ ಕೆಲಸ ಮಾಡುತ್ತಿದ್ದ ಕಾರ್ಮಿಕನೊಬ್ಬ ಸ್ಥಾವರದ ಮೇಲಿಂದ ಬಿದ್ದು ಸಾವನ್ನಪ್ಪಿರುವ ಘಟನೆ ಸೋಮವಾರ ನಡೆದಿದೆ. ಬಿಹಾರ ಮೂಲದ ರಾಕೇಶ್ ಯಾದವ (22) ಮೃತ ಕಾರ್ಮಿಕ. ವೈಟಿಪಿಎಸ್ ಸ್ಥಾವರದ ಮೇಲೆ ವೆಲ್ಡಿಂಗ್ ಕೆಲಸ ಮಾಡುವಾಗ ಆಯತಪ್ಪಿ ಕೆಳಗೆ ಬಿದ್ದಿದ್ದಾನೆ. ತಕ್ಷಣವೇ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾನೆ.

■ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಎಂಜಿನಿಯರ್‌ಗಳ ಸಂಘ: ಸುವರ್ಣ ಮಹೋತ್ಸವ ಹಾಗೂ ವಿಚಾರಸಂಕಿರಣ, ಅತಿಥಿಗಳು- ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ, ಸಚಿವ ಡಿ.ಕೆ. ಶಿವಕುಮಾರ್, ಸಂಘದ ಅಧ್ಯಕ್ಷ, ಆನಂದರಾವ್ ವೃತ್ತ, ಮ. 2.

## ವೈಟಿಪಿಎಸ್‌ನಲ್ಲಿ ಆಯತಪ್ಪಿ ಬಿದ್ದು ಕಾರ್ಮಿಕನ ಸಾವು

■ ವಿಕ ಸುದ್ದಿಲೋಕ ರಾಯಚೂರು

ತಾಲೂಕಿನ ಯರಮರಸ್ ಸೂಪರ್ ಕ್ರಿಟಿಕಲ್ ಶಾಖೋತ್ಪನ್ನ ವಿದ್ಯುತ್ ಕೇಂದ್ರ (ವೈಟಿಪಿಎಸ್)ದಲ್ಲಿ ಸೋಮವಾರ ಕೆಲಸ ಮಾಡುತ್ತಿದ್ದ ಕಾರ್ಮಿಕರೊಬ್ಬರು ಆಯತಪ್ಪಿ ಬಿದ್ದು ಮೃತಪಟ್ಟಿದ್ದಾರೆ.

ರಾಕೇಶ್ ಯಾದವ್(22) ಮೃತರು. 10 ಅಡಿ ಎತ್ತರದ ಸ್ಥಳದಲ್ಲಿ ಕೆಲಸ ಮಾಡುತ್ತಿದ್ದ ಅವರು ಆಕಸ್ಮಿಕವಾಗಿ ಆಯತಪ್ಪಿ ಬಿದ್ದರು. ತೀವ್ರ ಗಾಯಗೊಂಡ ಅವರು ಸ್ಥಳದಲ್ಲಿಯೇ ಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ.

ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೊಸ ದಿಗಂತ Pg-01 27/12/2016

## ಎಲ್ಲ ಸಂಸ್ಥೆಗಳೂ ಸೋಮಾರಿಯಲ್ಲ!

ಹಾಗೆಂದು ಸರ್ಕಾರದ ಎಲ್ಲ ಸಂಸ್ಥೆಗಳೂ ಹೀಗೇ ಸೋಮಾರಿತನ ಮಾಡುತ್ತಿವೆ ಎಂದೇನಲ್ಲ, ಪ್ರಮುಖವಾಗಿ ರಾಜ್ಯದ ರಾಜಧಾನಿಯಲ್ಲಿ, ತೆರಿಗೆ, ಶುಲ್ಕ ಇತ್ಯಾದಿಗಳ ನೆಪದಲ್ಲಿ ಹಣ ಹರಿದಾಡುವುದೇ ಹೆಚ್ಚು. ಇಂತಹ ಮಹಾನಗರಿಯಲ್ಲಿ ಬಿಬಿಎಂಪಿ, ಬಿಡಿಎ, ಬೆಸ್ಕಾಂ, ಜಲಮಂಡಳಿ, ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಮೆಟ್ರೋ, ರೈಲ್ವೆ ಇಲಾಖೆಯ ಕಚೇರಿಗಳಿವೆ. ಬಹುತೇಕ ಕಚೇರಿಗಳನ್ನೂ ಡಿಜಿಟಲೀಕರಣಕ್ಕೆ ಒಳಗೊಳ್ಳಬೇಕಿದೆ.

ಆನ್‌ಲೈನ್ ವ್ಯವಹಾರ ನಡೆಯುತ್ತಿದೆಯೇ ಹೊರತು ಅದು ಅಂಗೈಯಲ್ಲಿಲ್ಲ. ಕೆಲ ಸಂಸ್ಥೆಗಳು ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಪಾವತಿ ಅವಕಾಶ ಮಾಡಿಕೊಟ್ಟಿದ್ದರೆ, ಇನ್ನೂ ಕೆಲ ಸಂಸ್ಥೆಗಳು ಮೊಬೈಲ್ ಆ್ಯಪ್‌ಗಳನ್ನು ಪರಿಚಯಿಸಿದೆ. ಇದಕ್ಕೆ ಪೂರಕವಾಗಿ ಕೆಲ ಬ್ಯಾಂಕ್‌ಗಳೂ ತಮ್ಮ ಗ್ರಾಹಕರಿಗೆ ಪ್ರತ್ಯೇಕ ಆ್ಯಪ್‌ಗಳನ್ನು ನೀಡಿದೆ. ಆದರೆ, ಎಲ್ಲವೂ ಒಂದೇ ಆ್ಯಪ್ ಅಡಿ ಇಲ್ಲ ಎಂಬುದೇ ಸೋಜಿಗದ ಸಂಗತಿ. ➤ ಪುಟ 9

ಹೊಸ ದಿಗಂತ Pg-9 27/12/2016

## ಎಲ್ಲ ಸಂಸ್ಥೆಗಳೂ ಸೋಮಾರಿಯಲ್ಲ!

ಪುಟ 1ರಿಂದ ಹಾಗೆಂದು ವೇಳೆ ಇದ್ದರೂ ಅದಿನ್ನೂ ಜನರನ್ನು ತಲುಪಿಲ್ಲ.

**ಸದ್ಯದಲ್ಲೇ ಬರಲಿದೆ ಬೆಸ್ಕಾಂ ಮೊಬೈಲ್ ಆ್ಯಪ್**

ನಗದು ರಹಿತ ವ್ಯವಹಾರಕ್ಕೆ ಬೆಸ್ಕಾಂ ಮುನ್ನುಡಿ ಬರೆಯಲು ಸಜ್ಜಾಗಿದೆ. ಸದ್ಯ ಆನ್‌ಲೈನ್‌ನಲ್ಲಿ ಬಿಲ್ ಇತ್ಯಾದಿ ಕಟ್ಟಲು ಅವಕಾಶವಿದ್ದು, ಪೇಟಿಎಂ ಮೂಲಕವೂ ಪಾವತಿಸಬಹುದಾಗಿದೆ. ಗ್ರಾಹಕರ ಗುರುತು ಸಂಖ್ಯೆ ಅಥವಾ ಖಾತೆ ಸಂಖ್ಯೆ ನೀಡುವ ಮೂಲಕ ಶುಲ್ಕ ಕಟ್ಟಬಹುದಾಗಿದೆ. ಇಷ್ಟೇ ಅಲ್ಲದೆ, ಶುಲ್ಕ ಪಾವತಿ, ಗ್ರಾಹಕರ ದೂರು, ಹೊಸ ಸಂಪರ್ಕ, ಹೆಸರು ಬದಲಾವಣೆ, ಮೀಟರ್ ಬದಲಾವಣೆ, ತೆರಿಗೆ ಪಾವತಿ ಶುಲ್ಕ ಜೊತೆಗೆ ಇತ್ತೀಚಿನ ಮಾಹಿತಿಯನ್ನು ಪಡೆಯಬಹುದಾಗಿದೆ. ಜೊತೆಗೆ ಬೆಸ್ಕಾಂ ಮೊಬೈಲ್ ಆ್ಯಪ್ ಬಿಡುಗಡೆ ಮಾಡಲು ಸಿದ್ಧತೆ ಮಾಡಿಕೊಂಡಿದೆ.

**ಡಿಜಿಟಲೀಕೃತ ಸಾರಿಗೆ ಸೇವೆ**

ಹಲವಾರು ಸ್ಮಾರ್ಟ್ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿರುವ ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಕೂಡ ನಗದುರಹಿತ ವಹಿವಾಟಿಗೆ ಬೆಂಬಲಿಸಿವೆ. ಡೆಬಿಟ್/ಕ್ರೆಡಿಟ್ ಕಾರ್ಡ್ ಬಳಸಿ ತಿಂಗಳ ಬಿಎಂಟಿಸಿ ಪಾಸ್‌ಗಳನ್ನು ಪಡೆಯಬಹುದಾಗಿದೆ. ಚಿಲ್ಲರೆ ಸಮಸ್ಯೆಯನ್ನು ಬಗೆಹರಿಸಲು ನ.27ರಂದು ಬೆಂಗಳೂರಿನ 56 ವಿಭಾಗಗಳಲ್ಲಿ ಪಿಒಎಸ್ ಸೆಂಟರ್‌ಗಳನ್ನು ಬಿಎಂಟಿಸಿ ಅಳವಡಿಸಿದ್ದು, ಈ ಸೌಲಭ್ಯ ಅಳವಡಿಸಿದ ಕೇವಲ ಹತ್ತೇ ದಿನಗಳಲ್ಲಿ 30,825 ಮಾಸಿಕ ಪಾಸ್ ಪಿಒಎಸ್ ಕೇಂದ್ರಗಳಲ್ಲಿ ಮಾರಾಟವಾಗಿದೆ.

ಆನ್‌ಲೈನ್ ಸೇವೆಗೆಂದು ಈಗಾಗಲೇ ಡಿಜಿಟಲ್ ಕೆಎಸ್‌ಆರ್‌ಟಿಸಿ ಎಂಬ ವೇದಿಕೆ ತಯಾರಿಸಿದ್ದು, ಇದರ ಮೂಲಕ ನವೆಂಬರ್ ತಿಂಗಳಿನಿಂದ ಇಲ್ಲಿಯವರೆಗೆ 15 ಕೋಟಿಯಷ್ಟು ಆದಾಯ ಗಳಿಸಿದೆ. ನಗರದ ಶಾಂತಿನಗರ, ಜಯನಗರ ಮೆಜೆಸ್ಟಿಕ್, ಇನ್ಫೋಸಿಸ್, ಜಯನಗರ, ಮೈಸೂರು, ಮೈಸೂರು ಇನ್ಫೋಸಿಸ್, ಊಟಿ, ಚೆನ್ನೈ, ತಿರುಪತಿ ಸೇರಿದಂತೆ 10 ಕೆಎಸ್‌ಆರ್‌ಟಿಸಿ ವಿಭಾಗದಲ್ಲಿ ಪಿ.ಒ.ಎಸ್ ಸೆಂಟರ್‌ಗಳನ್ನು (ಪಾಯಿಂಟ್ ಆಫ್ ಸೇಲ್) ಅಳವಡಿಸಲಾಗಿದೆ. ಇದರ ಮೂಲಕ ಪ್ರಯಾಣಿಕರು ತಮ್ಮ ಡೆಬಿಟ್ ಕಾರ್ಡ್‌ಗಳನ್ನು ಸ್ವೈಪ್ ಮಾಡುವ ಮೂಲಕ ಕೆಎಸ್‌ಆರ್‌ಟಿಸಿ ಟಿಕೆಟ್ ಮಾಡಬಹುದು. ಮುಂದಿನ 15 ದಿನಗಳಲ್ಲಿ ಇನ್ನೂ 102 ಕೌಂಟರ್ ತೆರೆಯುತ್ತಲಿದ್ದು ಜ.10 ರ ವೇಳೆಗೆ ರಾಜ್ಯದ ಎಲ್ಲಾ ಕೆಎಸ್‌ಆರ್‌ಟಿಸಿ ಘಟಕಗಳಲ್ಲಿ ಪಿ.ಒ.ಎಸ್ ವಿಭಾಗ ತೆರೆಯಲಾಗುತ್ತದೆ. ಈಗಾಗಲೇ ಶೇ.20ರಷ್ಟು ಆದಾಯ ಕೆಎಸ್‌ಆರ್‌ಟಿಸಿ ಅಂತರ್ಜಾಲ ತಾಣದ ಮೂಲಕ ಟಿಕೆಟ್ ಖರೀದಿಯಿಂದ ಬರುತ್ತಿದೆ.

ಪ್ರಜಾವಾಣಿ 27/12/16 Pg 04

## ವೈಟಿಪಿಎಸ್ ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಶಕ್ತಿನಗರ: ಯರಮರಸ್ ಶಾಖೋತ್ಪನ್ನ ವಿದ್ಯುತ್ ಸ್ಥಾವರದಲ್ಲಿ (ವೈಟಿಪಿಎಸ್) ವೆಲ್ಡಿಂಗ್ ಕೆಲಸ ಮಾಡುತ್ತಿದ್ದ ಒಡಿಶಾ ಮೂಲದ ರಾಕೇಶ ಯಾದವ (22) ಆಯತಪ್ಪಿ ಕೆಳಗೆ ಬಿದ್ದು ಸೋಮವಾರ ಮೃತಪಟ್ಟಿದ್ದಾರೆ.

ಸ್ಥಾವರದ 800 ಮೆಗಾವಾಟ್ ಸಾಮರ್ಥ್ಯದ ಎರಡನೇ ಘಟಕದಲ್ಲಿ 30 ಅಡಿ ಎತ್ತರದಿಂದ ಬಿದ್ದು ತೀವ್ರವಾಗಿ ಗಾಯಗೊಂಡಿದ್ದ ರಾಕೇಶನನ್ನು ಚಿಕಿತ್ಸೆಗಾಗಿ ರಿಮ್ಸ್ ಆಸ್ಪತ್ರೆಗೆ ದಾಖಲಿಸಲಾಯಿತು. ಅಲ್ಲಿ ವೈದ್ಯರು ರಾಕೇಶ ಮೃತಪಟ್ಟಿರುವುದನ್ನು ದೃಢಪಡಿಸಿದರು.

ಇದೇ ಸ್ಥಾವರದಲ್ಲಿ 2015ರ ಜನವರಿಯಲ್ಲಿ ಮಣ್ಣು ಕುಸಿದು ಇಬ್ಬರು ಕಾರ್ಮಿಕರು ಮೃತಪಟ್ಟಿದ್ದರು.

ವಿಜಯ ಕರ್ನಾಟಕ Pg-7 27/12/2016



## ಇಂಧನರಹಿತ ಪರ್ಯಟನೆ

ನವೀಕರಿಸಬಹುದಾದ ಇಂಧನದ ಮಹತ್ವವನ್ನು ಸಾರುವಲ್ಲಿ ಸೋಲಾರ್ ಇಂಪಲ್ಸ್ 2 ಎನ್ನುವ ವಿಮಾನ ಯಶಸ್ವಿಯಾಯಿತು. ಸೌರ ಶಕ್ತಿಯ ಆಧಾರದ ಮೇಲೆ ಜಗತ್ತನ್ನು ಒಂದು ಸುತ್ತುಹಾಕಿತು ಈ ವಿಮಾನ. (ಅಬುಧಾಬಿಯಿಂದ ಗಗನಕ್ಕೆ ಚಿಮ್ಮಿದ ಸೋಲಾರ್ ಇಂಪಲ್ಸ್ 2 ಭಾರತ, ಮ್ಯಾನ್ಮಾರ್, ಚೀನಾ, ಜಪಾನ್, ಅಮೆರಿಕ, ಯುರೋಪ್ ಅನ್ನು ಹಾದು ಮತ್ತೆ ಅಬುಧಾಬಿಗೆ ತಲುಪಿತು 40,000 ಕಿಲೋಮೀಟರ್ ಪಯಣ). ಹಾರುವ ಸಂಶೋಧನಾಲಯವೆಂದೇ ಗುರುತಿಸಿಕೊಂಡಿರುವ ಈ ವಿಮಾನ ಭವಿಷ್ಯದಲ್ಲಿ ಜಗತ್ತಿನ ವಿಮಾನಯಾನದ ಚಿತ್ರಣವನ್ನು ಬದಲಿಸಲಿದೆ ಎಂದೇ ಹೇಳಲಾಗುತ್ತಿದೆ.